ವಿ.ಎಂ. ಮಂಜುನಾಥ್

# ದಲಿತ ಲೋಕ
## ಎಂದೂ ಬರಿದಾಗದ ಕಣಜ

**1** ಉದ್ರಿಕ್ತಗೊಂಡ ನದಿಯಂತೆ ಹೊಸ ಆವೇಶಗಳಲ್ಲಿ, ಭಿನ್ನ ಚಿಂತನೆಗಳಲ್ಲಿ ಹರಿಯುತ್ತಿದ್ದದ್ದು ಈಗ ನಿಂತಂತೆ ತೋರುತ್ತಿದೆಯಾದರೂ ದಲಿತ ಸಾಹಿತ್ಯದ ಮತ್ತೊಂದು ಮುಖವನ್ನು ಕಂಡುಕೊಳ್ಳಲು ಈಗಿನ ತಲೆಮಾರು ಯತ್ನಿಸುವಂತೆ ಕಾಣುತ್ತಿದೆ. ಅದರೊಂದಿಗೆ ಈಗ ಸಾಮಾಜಿಕ ಜಾಲತಾಣಗಳಲ್ಲಿ ದಲಿತ ಹೈಟೆಕ್ ಚಳವಳಿಗಳು ನಡೆಯುತ್ತಿವೆ ಮತ್ತು ಅವು ರಾಜಕೀಯ ಪಕ್ಷಗಳ ಗುಲಾಮಗಿರಿಯಲ್ಲಿ ಸೋರಿಹೋಗುತ್ತಿರುವುದು ಖೇದದ ವಿಚಾರ. ಇದೆಲ್ಲದರ ಹೊರತಾಗಿ ಈಗ ಹೊಮ್ಮುತ್ತಿರುವ ಬಹುಪಾಲು ದಲಿತ ಮತ್ತು ದಲಿತೇತರ ಲೇಖಕರು ಬಾಬಾ ಸಾಹೇಬ್ ಅಂಬೇಡ್ಕರ್ ಚಿಂತನೆಗಳೊಂದಿಗೆ ಸಾಹಿತ್ಯ ಲೋಕಕ್ಕೆ ಧುಮುಕುತ್ತಿರುವುದು ಕೊಂಚಮಟ್ಟಿಗಾದರೂ ಜೀವಂತಿಕೆಯನ್ನು ತೋರುತ್ತಿದೆ, ಆ ಕ್ರಿಯೆ ರೊಟ್ಟಿಯೊಳಗಿನ ಜೇನನ್ನು ಹೀರುವಂತಾಗಬೇಕು.

**2** ಸಭೆಯಲ್ಲಿ ಯಾರೋ ಒಬ್ಬರು, 'ಇನ್ನೂ ಎಷ್ಟು ವರ್ಷ ಮೀಸಲಾತಿ ಬೇಕು?' ಎಂದು ಕೇಳಿದ ಪ್ರಶ್ನೆಗೆ, 'ಎಲ್ಲಿಯವರೆಗೂ ಮೇಲ್ಜಾತಿಯವರು ರೈಲ್ವೆ ಗ್ಯಾಂಗ್‌ಮನ್ ಮತ್ತು ಜಾಡಮಾಲಿ ಹುದ್ದೆಗಳಿಗೆ ಅರ್ಜಿ ಹಾಕುವುದಿಲ್ಲವೋ ಅಲ್ಲಿಯವರೆಗೂ ಮೀಸಲಾತಿ ಬೇಕು.' ಎಂದು ಸಿ.ಎಸ್. ದ್ವಾರಕಾನಾಥ್ ಅವರು ಉತ್ತರಿಸಿದ್ದರು. ಕಪ್ಪುಸಾಹಿತ್ಯ ಅನ್ನುವುದು ಸಾರ್ವಕಾಲಿಕ ಕ್ರಾಂತಿ ಮತ್ತು ದಿಟ್ಟನಡೆ. ದಲಿತ ಸಾಹಿತ್ಯ ಸಂಬೋಧನೆಯಲ್ಲೇ ಸೌಂದರ್ಯ ಇದೆ. ಮತ್ತು ಸಾರ್ವಜನಿಕವಾಗಿ ಸಂವಿಧಾನವನ್ನು ಸುಡುತ್ತಿರುವ ಈ ಕಾಲದಲ್ಲಿ ನಾವಿದ್ದೇವೆ, ಇದರ ಹಿನ್ನೆಲೆ ಮತ್ತು ಮರ್ಮ ಅತ್ಯಂತ ಸುಲಭದ್ದು.

**3** ವಿಮರ್ಶೆ ಬರೆದಿದ್ದಾರೆ, ಸರಿಯಾದ ವಿಮರ್ಶೆಯಾಗಿದೆಯೇ ಎಂಬುದರ ಬಗ್ಗೆ ಸಂದೇಹವಿದೆ. ದಲಿತ ಕೃತಿಗಳನ್ನು ಅಂತರರಾಷ್ಟ್ರೀಯ ಪ್ರಕಾಶನ ಸಂಸ್ಥೆಗಳಿಗೆ ತಲುಪಿಸುವಲ್ಲಿ ಹಲಬಗೆಯ ಹುನ್ನಾರಗಳು ನಡೆದಿರಬಹುದು, 'ಕುಸುಮಬಾಲೆ'ಯ ಇಂಗ್ಲಿಷ್ ಆವೃತ್ತಿಯ ಸೋಲು ನಮ್ಮ ಮುಂದಿದೆ. ಇದಕ್ಕಿಂತ ಮಹತ್ತರ ಕೃತಿಗಳು ನಮ್ಮಲ್ಲಿವೆ, ದೇಶಾದ್ಯಂತ ಪರಿಚಯಿಸುವ ದೊಡ್ಡ ಮನಸ್ಸು ಬೇಕಾಗಿದೆ. ದಲಿತ ಚಿಂತನೆಗಳ, ಅನುಭವಗಳ ಕೃತಿಗಳನ್ನು ವಿಶ್ವಕ್ಕೆ ಪರಿಚಯಿಸುವಲ್ಲಿ 'ನವಯಾನ' ಈ ನಿಟ್ಟಿನಲ್ಲಿ ಮಹತ್ತರ ಹೆಜ್ಜೆ ಇರಿಸಿದೆ.